**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-477/2023 **PW**-1

**ದಿಃ 05.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ರವರ ಪ್ರತಿವಾದಿ ಪರ ಶ್ರೀ ಜೆಡ್ ಕೆ ಟಿ ವಕೀಲರಿಂದಃ**

**1.** ನನ್ನ ಜನ್ಮ ದಿನಾಂಕಃ22.07.1972 ಆಗಿರುತ್ತದೆ. ನನ್ನ ಮದುವೆ ದಿನಾಂಕಃ25.04.2008 ಆಗಿರುತ್ತದೆ. ನಮಗೆ ಯಾವದೇ ಸಂತಾನ ಇರುವದಿಲ್ಲ ಎಂದರೆ ಸರಿ. ದಿನಾಂಕಃ28.05.2005 ರಲ್ಲಿ ನಾನು ಪಶು ವೈದ್ಯಾದಿಕಾರಿಯಾಗಿ ನೇಮಕಗೊಂಡಿರುತ್ತೇನೆ. ನೇಮಕವಾದಾಗಿನಿಂದ ಇಂದಿನವರೆಗೂ ಸರ್ವೆ ನಂಃ925 ಮತ್ತು 926 ಎ ಆಸ್ತಿಗಳಿಗೆ ಸಂಬಂದಿಸಿದಂತೆ ನಿಮ್ಮ ವೈಯಕ್ತಿಕ ಸಹಾಯ ಏನು ಇದೆ ಎಂದರೆ ಸಾಕ್ಷಿ ಏನೂ ಇಲ್ಲ ಎನ್ನುತ್ತಾರೆ. ನನ್ನ ತಾಯಿಯ ತವರು ಮನೆಯ ವಿಳಾಸ ನನಗೆ ಗೊತ್ತಿದೆ. 1 ನೇ ಪ್ರತಿವಾದಿಯು ಮನಬಸಪ್ಪ ಹಳ್ಯಾಳ ಇವರ ಮಕ್ಕಳು. ಸದರಿ ಕುಟುಂಬದವರು ಒಳ್ಳೆಯ ಸುಂಸ್ಕೃತರು ಹಾಗೂ ಆರ್ಥಿಕವಾಗಿ ಸದೃಡ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಹುಟ್ಟುವ ಪೂರ್ವದಲ್ಲಿ 1 ನೇ ಪ್ರತಿವಾದಿ ಹಾಗೂ ಮನಬಸಪ್ಪ ಹಳ್ಯಾಳ ಇವರು ಹಸುಗಳನ್ನು ಸಾಕಿಕೊಂಡು ಹೈನುಗಾರಿಕೆ ಮಾಡುತ್ತಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಶ್ರೀ ಬಾಣದ ವಕೀಲರ ಕಡೆಯಿಂದ ನೋಟೀಸು ಕೊಡಿಸುವ ಪೂರ್ವದಲ್ಲಿ ಶ್ರೀಮತಿ ಶಕುಂತಲಾ ನಾಯ್ಕರ ಎನ್ನುವವರ ಕಡೆಯಿಂದ ಕೂಡಾ ಒಂದು ನೋಟೀಸು ಕೊಡಿಸಿದ್ದೀರಿ ಎಂದರೆ ಸಾಕ್ಷಿ ಕೊಡಿಸಿದ್ದೇನೆ ಎನ್ನುತ್ತಾರೆ. 1 ನೇ ಪ್ರತಿವಾದಿಯಿಂದ 2 ನೇ ಪ್ರತಿವಾದಿಗೆ ಸಿಟಿಎಸ್ ನಂಃ926 ಎ ಕ್ಷೇತ್ರ 245.3/9 ಚ ಯಾರ್ಡ ಆಸ್ತಿಯನ್ನು ದಾನಪತ್ರ ಮಾಡಿ ನೋಂದು ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲದಂತೆ ಮಾಡಿರುತ್ತಾರೆ ಎಂದು ಮುಂದುವರೆದು ದಾನಪತ್ರ ಎಂಬುದಾಗಿ ಮಾಡಿರುತ್ತಾರೆ ಎನ್ನುತ್ತಾರೆ. ದಾವಾ ಅನುಸೂಚಿ ಬಿ ಐಟಂ 1 ಮತ್ತು 2 ರ ಆಸ್ತಿ ಪ್ರತಿವಾದಿ 1 ರವರು ತಮ್ಮ ಸ್ವಂತ ಶ್ರಮದಿಂದ 1972 ರಲ್ಲಿ ಖರೀದಿ ಮಾಡಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

2. ಪ್ರತಿವಾದಿ 1 ರವರು 1972 ನೇ ಸಾಲಿನಲ್ಲಿ ಕ್ರಯ ಪತ್ರ ಆದ ನಂತರ ಶೆಡ್ಯೂಲ ಬಿ ಎರಡೂ ಆಸ್ತಿಗಳಿಗೆ ಸಂಬಂದಿಸಿದಂತೆ ದಾಖಲೆಗಳಲ್ಲಿ ತಮ್ಮ ಹೆಸರು ನೋಂದಾಯಿಸಿಕೊಂಡಿರುತ್ತಾರೆಂದರೆ ಸರಿ. 1972 ನೇ ಸಾಲಿನಿಂದಲೂ ಅಂದರೆ ಸದರಿ ಆಸ್ತಿಯನ್ನು ಖರೀದಿ ಮಾಡಿದ ದಿನದಿಂದಲೂ ದಾವಾ ಬಿ ಶೆಡ್ಯೂಲ 1 ಮತ್ತು 2 ರ ಆಸ್ತಿಗಳ ಮ್ಯುಟೇಶನ ಹಾಗೂ ಟ್ಯಾಕ್ಸ ಎಲ್ಲವೂಗಳು ಅವರ ಹೆಸರಿನಲ್ಲಿವೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಶೆಡ್ಯೂಲ ಸಿ ನಲ್ಲಿ ತೋರಿಸಿರುವ ಎಲ್ಲಾ ಮೊತ್ತಗಳು ಇವತ್ತಿನವರೆಗೂ ಬ್ಯಾಂಕನಲ್ಲಿ ನನ್ನ ತಂದೆ ಹೆಸರಿಗೆ ಜಮಾ ಇರುತ್ತವೆಂದರೆ ಸರಿ. ಶ್ರೀಮತಿ ಶಕುಂತಲಾ ನಾಯ್ಕರ ಎಂಬ ವಕೀಲರು ಬ್ಯಾಂಕಗೆ ನೋಟೀಸು ಕೊಡುವ ಮೊದಲು ಕೂಡಾ ದಾವಾ ಶೆಡ್ಯೂಲ ಸಿ ಗೆ ಸಂಬಂದಿಸಿದ ಎಫ್ ಡಿ ರಶೀದಿಗಳು ಪ್ರತಿವಾದಿ1 ರವರ ಕಡೆಯೇ ಇದ್ದವು ಎಂದರೆ ಸರಿ. ಸದರಿ ನೋಟೀಸು ಬಂದ ನಂತರ ಪ್ರತಿವಾದಿ 1 ರವರು ನನ್ನ ಮೇಲೆ ದೂರು ಕೊಟ್ಟಿದ್ದು ಕೇಶ್ವಾಪೂರ ಪೊಲೀಸ ಠಾಣೆಯಲ್ಲಿ ನನ್ನ ವಿರುದ್ದ ಎಫ್ ಐಆರ್ ಆಗಿತ್ತು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಶೆಡ್ಯೂಲ ಸಿ ಆಸ್ತಿಗೆ ಸಂಬಂದಿಸಿದಂತೆ ದಾಖಲೆಗಳು ಕಳುವಾಗಿವೆ ಎಂದು ಪ್ರತಿವಾದಿ 1 ಅಂದರೆ ನನ್ನ ತಾಯಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆ ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಾವಾ ಶೆಡ್ಯೂಲ ಎ ಪ್ರಾಪರ್ಟಿಯಲ್ಲಿ ನನಗೆ ಒಂದು ಪಾಲಿನ ಹಿಸ್ಸೇ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎ- ಶೆಡ್ಯೂಲ ಪ್ರಾಪರ್ಟಿಗೆ ಸಂಬಂದಿಸಿದಂತೇ ನನ್ನ ತಂದೆ ತಾವು ಬದುಕಿದ್ದಾಗ ಸಾಲ ತೆಗೆದುಕೊಂಡಿದ್ದು ಅವರು ಮರಣ ಹೊಂದಿದನಂತರ ಪ್ರತಿವಾದಿ 1 ರಿಂದ 4 ರವರು ಸದರಿ ಸಾಲ ತೀರಿಸುವಂತೆ ನೋಟೀಸು ಬಂದವು ಎಂದರೆ ಸಾಕ್ಷಿ ಬಂದಿದ್ದವು ಎನ್ನುತ್ತಾರೆ. ನಂತರ ಸದರಿ ಆಸ್ತಿ ಹರಾಜುಗೆ ಬಂದು ಬ್ಯಾಂಕನಿಂದ ನಮಗೆ ಶೋಕಾಸ ನೋಟೀಸು ಕೊಟ್ಟರೆಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ದಿನಾಂಕಃ16.09.2016 ರಂದು ಬ್ಯಾಂಕಗೆ ನೀವು ಈ ದಾಖಲೆಯ ಜೊತೆ ತಂದೆಯ ಮರಣ ಪ್ರಮಾಣ ಪತ್ರ ಸೇರಿಸಿ ಕೊಟ್ಟಿದ್ದು ಇದೇನಾ ಎಂದರೆ ಸಾಕ್ಷಿ ಹೌದು ಎಂದು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು.

3. ಸದರಿ ಶೆಡ್ಯೂಲ ಎ ಆಸ್ತಿಗೆ ಸಂಬಂದಿಸಿದ ಸಾಲವನ್ನು ಪ್ರತಿವಾದಿ 2 ರವರು ತಮ್ಮ ಖಾತೆಯಿಂದ ಹಣ ಕೊಟ್ಟು ಒ ಟಿ ಎಸ್ ಮಾಡಿಸಿರುತ್ತಾರೆಂದರೆ ಸಾಕ್ಷಿ ನನ್ನ ತಾಯಿ ಹೊಲವನ್ನು ಲಾವಣಿ ಕೊಟ್ಟಿದ್ದು ಆ ಹಣದಿಂದ ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ.

ಲಾವಣಿ ಕೊಟ್ಟಿದ್ದಾರೆಂದು ಹೇಳಿದ್ದು ಆ ಲಾವಣಿದಾರ ಹೆಸರು ಏನೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಅವರಿಗೆ ಗೊತ್ತು ಎನ್ನುತ್ತಾರೆ. 2016 ರಿಂದ ಸದರಿ ಸೂಟ ಶಡ್ಯೂಲ ಎ ಪ್ರಾಪರ್ಟಿ ಪಡಾ ಬಿದ್ದಿದೆ ಎಂದರೆ ಸಾಕ್ಷಿ ಅದು ಅವರಿಗೆ ಗೊತ್ತು ಎನ್ನುತ್ತಾರೆ. ನನ್ನ ತಾಯಿ ಸಾಕಷ್ಟು ಅನಾರೋಗ್ಯದ ಕಾರಣದಿಂದ ಈಗ ಚಿಕಿತ್ಸೆ ಪಡೆಯುತ್ತಿದ್ದು ಬಹಳ ದುರ್ಬಲರಾಗಿದ್ದಾರೆಂದರೆ ಸರಿ. 2 ನೇ ಪ್ರತಿವಾದಿ ತನ್ನ ತಾಯಿಯನ್ನು ನಿರಂತರವಾಗಿ ನೋಡಿಕೊಳ್ಳುತ್ತಿದ್ದಾರೆಂದರೆ ಸಾಕ್ಷಿ ನಾನು ಟ್ರಾನ್ಸಪರ ಆಗಿ ಬಂದ ನಂತರ ಅವರು ನೋಡಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ನನ್ನ ಮನೆ ವಿಳಾಸ ಈಗ ಕಲಘಟಗಿ ತಾಲೂಕಿನ ದುಮ್ಮವಾಡ ಗ್ರಾಮದಲ್ಲಿ ಇರುತ್ತದೆ. ನನಗೆ ರೈತರು ಆ ಮನೆಯನ್ನು ಕೊಟ್ಟಿರುತ್ತಾರೆ. ನನ್ನ ತಾಯಿ ಈ ವಯಸ್ಸಿನಲ್ಲಿ ಚಿತ್ರಹಿಂಸೆ ಕೊಟ್ಟು ಈ ರೀತಿ ದಾವಾ ಸಲ್ಲಿಸಿ ದಾವಾ ಶೆಡ್ಯೂಲ ಬಿ 1 ಮತ್ತು 2 ರ ಆಸ್ತಿಯನ್ನು ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಿರುತ್ತೇನೆಂದರೆ ಸಾಕ್ಷಿ ನನ್ನ ತಾಯಿಯನ್ನು ದೇವರಂತೆ ನೋಡಿಕೊಳ್ಳುತ್ತಿದ್ದೆ ಎಂದು ನುಡಿಯುತ್ತಾರೆ ಹಾಗೂ ಸದರಿ ಆಸ್ತಿಗಳು ನನ್ನ ತಂದೆ ದುಡಿದ ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ. 2016 ವರೆಗೆ ತಾಯಿಯನ್ನು ನೋಡಿಕೊಂಡಿರುತ್ತೇನೆಂದು ತೋರಿಸಲು ನಿಮ್ಮ ಬಳಿ ವೈದ್ಯಕೀಯ ದಾಖಲೆಗಳೇನಾದರೂ ಇದೆಯಾ ಎಂದರೆ ಸಾಕ್ಷಿ ಎಲ್ಲವೂ ಅವರ ಬಳಿಯೇ ಇವೆ ಎನ್ನುತ್ತಾರೆ. 2010 ರಲ್ಲಿ ನನ್ನ ತಾಯಿಗೆ ಹೊಟ್ಟೆನೋವು  ಡಾಃಕಿಣಿ ರವರ ಬಳಿ ಕರೆದುಕೊಂಡು ಹೋಗಿ ಆಪರೇಶನ ಮಾಡಿಸಿರುತ್ತೇನೆ ಎನ್ನುತ್ತಾರೆ. ಸದರಿ ವೈದರು ಈಗ ಇದ್ದಾರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಹೆಂಡತಿ ಸವಿತಾ ಎನ್ನುವವರು ಹಳೇಹುಬ್ಬಳ್ಳಿಯ ಇಂಡಿ ಮನೆತನದವರು ಎಂದರೆ ಸರಿ. ಸದರಿಯವರು ಇಂಡಸ್ಟ್ರಿಯಾಲಿಸ್ಟ ಹಾಗೂ ಖ್ಯಾತ ಉದ್ಯಮಿಗಳೆಂದರೆ ಸರಿ. ನಿಮ್ಮ ಮದುವೆಯ ನಂತರ ತನ್ನ ಹೆಂಡತಿ ಜೊತೆ ಹೇಳದೇ ಕೇಳದೇ ಮನೆ ಬಿಟ್ಟು ಬೇರೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ನಾನು ಹೇಳದೇ ಹೋಗಿಲ್ಲ 2013 ನೇ ಸಾಲಿನಲ್ಲಿ ನನಗೆ ಹಾವೇರಿಗೆ ಟ್ರಾನ್ಸಪರ ಆದಾಗ ಹೋಗಿರುತ್ತೇನೆ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಕೇಶ್ವಾಪೂರ ಪೊಲೀಸ ಠಾಣೆ ಹುಬ್ಬಳ್ಳಿ ಠಾಣಾದಿಕಾರಿ ನೀಡಿರುವ ಸ್ವೀಕೃತಿ ತೋರಿಸಿದಾಗ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ದಿನಾಂಕಃ29.09.2023 ರಂದು 2 ನೇ ಪ್ರತಿವಾದಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ ಎರೇಬೂದಿಹಾಳ ರವರಿಗೆ ಓ ಟಿ ಎಸ್ ಯೋಜನೆ ಅಡಿಯಲ್ಲಿ ತಮ್ಮ ತಂದೆ ಮಾಡಿದ ಸಾಲವನ್ನು ತುಂಬಿ ತೀರಿಸಿದರು ಎಂದರೆ ಸಾಕ್ಷಿ ದಾಖಲೆ ನೋಡಿ ಹೌದು ಎನ್ನುತ್ತಾರೆ. ಸದರಿ ದಾಖಲೆ ಜೆರಾಕ್ಸ ಪ್ರತಿಯಾಗಿದ್ದು ಸದರಿ

ದಾಖಲೆಯನ್ನು ನಿಡಿ 3 ಎಂದು ಗುರುತಿಸಲಾಯಿತು. ಸದರಿ ಹಣವನ್ನು 2 ನೇ ಪ್ರತಿವಾದಿ ತಮ್ಮ ಖಾತೆಯಿಂದಲೇ ಜಮಾ ಮಾಡಿರುತ್ತಾರೆಂದರೆ ಸಾಕ್ಷಿ ತಮ್ಮ ಖಾತೆಗೆ ಹಾಕಿಕೊಂಡು ನಂತರ ಜಮಾ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಹಣವನ್ನು ನನ್ನ ಪಾಲಿನಲ್ಲಿ ನಾನು ಹಾಗೂ ಉಳಿದವರ ಪಾಲಿನಲ್ಲಿ ಉಳಿದವರು ಹಂಚಿಕೊಳ್ಳಬೇಕೆಂದರೆ ಸಾಕ್ಷಿ ಲಾವಣಿ ಹಣದಿಂದ ಅವರು ಪಾವತಿ ಮಾಡಿರುವ ಕಾರಣ ಹಂಚಿಕೊಳ್ಳಲು ಬರುವದಿಲ್ಲ ಎನ್ನುತ್ತಾರೆ. 2008 ರಿಂದ ದಾವಾ ಶೆಡ್ಯೂಲ ಎ ಆಸ್ತಿಗೆ ಎಷ್ಟು ಬಾರಿ ಬೇಟಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ನಾನು ಹೋಗಿಯೇ ಇಲ್ಲ ಎನ್ನುತ್ತಾರೆ. ಸದರಿ ಆಸ್ತಿ ಇದುವರೆಗೂ ಯಾರಿಗೂ ಲಾವಣಿ ಕೊಟ್ಟಿಲ್ಲ ಅದು ಈಗಲೂ ಕೂಡಾ ಪಡಾ ಬಿದ್ದಿದೆ ಎಂದರೆ ಸಾಕ್ಷಿ ದಾವಾ ಹಾಕಿದ ಮೇಲೆ ಕೊಟ್ಟಿಲ್ಲ ಎನ್ನುತ್ತಾರೆ. ನಿಪಿ 1 ರಿಂದ 10 ರ ದಾಖಲೆಗಳಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ಅಂದರೆ ಕುರಗುಂದಿ ಪ್ಯಾಮಿಲಿಯ ವಂಶವೃಕ್ಷವನ್ನು ತೋರಿಸಿಲ್ಲ ಬದಲಿಗೆ ತೋಟಗೇರಿ ಪ್ಯಾಮಿಲಿ ವಂಶವೃಕ್ಷ ತೋರಿಸಿ ಸುಳ್ಳು ದಾವೆ ಮಾಡಿರುತ್ತೀರಿ ಎಂದರೆ ಸಾಕ್ಷಿ ನಿಂಗಪ್ಪ ತೋಟಗೇರ ಎನ್ನುವವರಿಗೆ ಮಕ್ಕಳಿಲ್ಲದ ಕಾರಣ ನನ್ನ ತಂದೆಯನ್ನು ದತ್ತು ತೆಗೆದುಕೊಂಡಿದ್ದು ಅವರ ಆಸ್ತಿಯನ್ನು 2015 ರಲ್ಲಿ ಮಾರಾಟ ಮಾಡಿ ಆ ಹಣವನ್ನು ತಂದು ಯರೇಬೂದಿಹಾಳ ಗ್ರಾಮದ ಆಸ್ತಿ ಹಿಡಿದಿದ್ದರು ಎನ್ನುತ್ತಾರೆ. ಅದೇ ರೀತಿ ಆ ಕ್ರಯ ಪತ್ರದಲ್ಲೂ ಕೂಡಾ ತೋಟಗೇರಿ ಕುಟುಂಬ ಎಂಬುದಾಗಿ ಇದೆ ಎನ್ನುತ್ತಾರೆ. ದಾವಾ ಶೆಡ್ಯೂಲ ಎ ಹಾಗೂ ಸಿ ಆಸ್ತಿ ಗಳಲ್ಲಿ ಮಾತ್ರ ನನಗೆ ಹಿಸ್ಸೇ ಇದೆ ಅದು ಸಾಲದ ಹಣವನ್ನು ಮರುಪಾವತಿ ಮಾಡುವ ಶರತ್ತಿನ ಮೇರೆಗೆ ಹೊರತು ದಾವಾ ಶೆಡ್ಯೂಲ ಬಿ ನಲ್ಲಿ ನನಗೆ ಯಾವದೇ ರೀತಿಯ ಹಕ್ಕು ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ನನ್ನ ಹಾಗೂ ನನ್ನ ಹೆಂಡತಿಯ ಆದಾರ ಕಾರ್ಡ ಹಾಗೂ ವೋಟರ ಐಡಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಆದರೂ ನಾನು ಸುಳುಳದಾವೆ ಮಾಡಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**